ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು 9 ನೇ ಹೆಚ್ಚುವರಿ ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧಿಕರಣ ಮುಧೋಳ.

ಎಂ.ವಿ.ಸಿ. ನಂ. 617/2025

**ದಿನಾಂಕಃ 9 ನೇ ಏಪ್ರೀಲ 2026**

| ಅರ್ಜಿದಾರರು: | ಃ ವಿರುದ್ಧಃ | ಎದುರುದಾರರ: |
|---|---|---|
| ಶ್ರೀ.ಭೀಮಪ್ಪ ತಂದೆ ಹಣಮಂತ<br>ಗುರಗೋಳ ಮತ್ತು ಇನ್ನೊಬ್ಬರು | | ಶ್ರೀ.ರಮೇಶ ತಂದೆ ಗುರುಪಾದಪ್ಪ<br>ಸಾವಳಗಿ |

1. ಅರ್ಜಿದಾರರು ಈ ಅರ್ಜಿಯಲ್ಲಿ ಹೇಳಿರುವಂತೆ ದಿನಾಂಕಃ 29.07.2025 ರಂದು ಸಾಯಂಕಾಲ 5-00 ಗಂಟೆ ಸುಮಾರಿಗೆ ಬರಗಿ - ಮುಧೋಳ ರಸ್ತೆಯ ಮೇಲೆ ಪ್ರಕಾಶ ತಂದೆ ಶ್ರೀಮಂತ ಸುನಗಾರ ಈತನ ದ್ವಿಚಕ್ರ ವಾಹನ ನೊಂದಣಿ ಸಂಖ್ಯೆ.ಕೆಎ.48/ಆರ್-8726 ರಲ್ಲಿ ಕಾರ್ತಿಕ ಈತನು ಹಿಂಬದಿಯ ಸವಾರನಾಗಿ ಪ್ರಯಾಣಿಸುತ್ತಿರುವಾಗ ಇಂಗಳಗಿ ಐ.ಟಿ.ಐ ಕಾಲೇಜಿನ ಹತ್ತಿರ ಬರುತ್ತಿರುವಾಗ, ಎದುರುದಾರ ಮಾಲೀಕತ್ವದ ದ್ವಿಚಕ್ರ ವಾಹನ ನೊಂದಣಿ ಸಂಖ್ಯೆಃಕೆಎ.48/ಇಎ-6369 ರ ಸವಾರನು ತನ್ನ ದ್ವಿಚಕ್ರ ವಾಹನವನ್ನು ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಪ್ರಕಾಶ ರವರು ಚಲಾಯಿಸಿಕೊಂಡು ಹೋಗುತ್ತಿರುವ ದ್ವಿಚಕ್ರ ವಾಹನಕ್ಕೆ ಎದುರುಗಡೆಯಿಂದ ಡಿಕ್ಕಿ ಪಡಿಸಿ ಈ ಅಪಘಾತಪಡಿಸಿದ್ದು ಇದರ ಪರಿಣಾಮದಿಂದ ಕಾರ್ತಿಕನಿಗೆ ತೀವ್ರ ಸ್ವರೂಪದ ಗಾಯಗಳು ಆಗಿ ಮುಧೋಳದ ಸಾಯಿ ಆಧಾರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿರುವರು ಎಂಬುದನ್ನು ಅರ್ಜಿದಾರರು ರುಜುವಾತುಪಡಿಸುವರೇ?

2. ಅರ್ಜಿದಾರರು ಪರಿಹಾರವನ್ನು ಪಡೆಯಲು ಅರ್ಹರೇ? ಒಂದು ವೇಳೆ ಅರ್ಹವಾಗಿದ್ದರೆ ಎಷ್ಟು ಪರಿಹಾರ ಪಡೆಯಲು ಅರ್ಹರು?

3. ಯಾವ ತೀರ್ಪು ಮತ್ತು ಆದೇಶ?

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಹೆಚ್ಚುವರಿ
ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧಿಕರಣ
ಮುಧೋಳ.